ಹಾಕಬೇಕು. ಅದಕ್ಕೆ 53 ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಾ ಇದ್ದೇವೆ. 66 ಕೆವಿ ಲೈನ್ ಒಂದನ್ನು ಕೂಡ ಅಲ್ಲಿ ಹಾಕುತ್ತಾ ಇದ್ದೇವೆ. ಅದಷ್ಟು ಜಾಗ್ರತೆ ಅದನ್ನು ಪ್ರಾರಂಭ ಮಾಡಲು ಪ್ರಯತ್ನ ಮಾಡುತ್ತಾ ಇದ್ದೇವೆ. 1993-94 ರೊಳಗಾಗಿ ಅದನ್ನು ಮಾಡುತ್ತೇವೆ ಎಂದು ಹೇಳಿದ್ದೇನೆ. 1992-93 ರಲ್ಲಿ ಆ ಕೆಲಸವನ್ನು ಪ್ರಾರಂಭ ಮಾಡುತೇವೆ.

ಡಾ: ಎನ್. ಬಿ. ನಂಜಪ್ಪ :- ಹಿರಿಸಾವೆಗೆ ಸಬ್-ಸ್ಟೇಷನ್ ಮಂಜೂರಾಗಿದೆ. ಈ ಸ್ಟೇಷನ್‌ನಿಂದ ನಾಗಮಂಗಲಕ್ಕೂ ಅನುಕೂಲವಾಗುತ್ತದೆ.

ವಿಷಯ :- ಶೀಘ್ರಲಿಪಿ ಪರೀಕ್ಷೆಗಾಗಿ ಓದುಗರ ಪರೀಕ್ಷಕರುಗಳ ಆಯ್ಕೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 425 : (2196)

ಶ್ರಿ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ)

ಶ್ರಿ ಬಸವರಾಜ ಪಾಟೀಲ್ ಅಟ್ಟೂರ್(ಬಸವಕಲ್ಯಾಣ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ವಾಣಿಜ್ಯ ಪರೀಕ್ಷೆಯ, ಶೀಘ್ರಲಿಪಿಯ ಓದುಗರ ಆಯ್ಕೆ ಸಮಿತಿ ಸದಸ್ಯರುಗಳ ಹೆಸರುಗಳು (ಬೆಂಗಳೂರು ಸಿಟಿ ಬಿಟ್ಟು)

ಆ. ಅವರ ಪೈಕಿ ನಿಖರವಾಗಿ ಕೆಲಸ ಮಾಡುತ್ತಿರುವ ಶೀಘ್ರಲಿಪಿಕಾರರೆಷ್ಟು?

ಇ. ಅವರ ಪೈಕಿ ವಾಣಿಜ್ಯ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಪ್ರಾಚಾರ್ಯರು ಅಥವಾ ಭೋದಕರೆಷ್ಟು?

ಈ. ಶೀಘ್ರಲಿಪಿ ಭೋದನೆಗೆ ಸಂಬಂಧಪಡದವರನ್ನು ಓದುಗರ ಆಯ್ಕೆ ಸಮಿತಿಗೆ ಬೇರೆ ಬೇರೆ ಕೇಂದ್ರಗಳಿಗೆ ನೇಮಕ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ. ಹಾಗಿದ್ದಲ್ಲಿ ಸದರಿ ಸಮಿತಿಯ ಆಯ್ಕೆಯನ್ನು ವಜ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರಿ ಎಂ. ವೀರಪ್ಪಮೊಯಿಲಿ :- (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು)-

ಅ. ಈ ಕಾರ್ಯವು ಪರೀಕ್ಷೆಗೆ ಸಂಬಂಧಿಸಿದ್ದು ಮತ್ತು ಗೋಪ್ಯವಾದ ವಿಷಯವಾದ್ದರಿಂದ ಮೌಲ್ಯ ಮಾಪಕರ ಹೆಸರುಗಳನ್ನು ಕೊಡಲಾಗುವುದಿಲ್ಲ.

ಆ. ಆರು.

ಇ. ಐದು.

ಈ. ಇಲ್ಲ.

ಉ. ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರಿ ಪೆರಿಕಲ್ ಎಂ. ಮಲ್ಲಪ್ಪ :- ಶೀಘ್ರಲಿಪಿಯ ಓದುಗರ ಆಯ್ಕೆ ಸಮಿತಿ ಸದಸ್ಯರು ಹೆಸರುಗಳನ್ನು ಕೊಡಿ ಅಂತ ಕೇಳಿದ ನನ್ನ ಮೊದಲನೇ ಪ್ರಶ್ನೆಗೆ ಉತ್ತರವಾಗಿ ಇದು ಗೌಪ್ಯವಾದ ವಿಚಾರ ಅಂತ ಹೇಳಿದ್ದಾರೆ. ಆದರೆ, ಇದು ಗೌಪ್ಯ ವಿಚಾರವಲ್ಲ. ಏಕೆಂದರೆ, ಶೀಘ್ರಲಿಪಿ ಓದುಗರನ್ನು ಪರೀಕ್ಷೆ ಮಾಡಲು ಯಾರೇ ಪರೀಕ್ಷಕರನ್ನು ನೇಮಕ ಮಾಡಬೇಕಾದರೆ ಸರ್ಕಾರದಲ್ಲಿ ನಿಯಮಗಳನ್ನು ಪರಿಪಾಲಿಸಬೇಕಾಗುತ್ತದೆ . ಆದರೆ, ಈ ಶೀಘ್ರಲಿಪಿ ಓದುಗರ ಪರೀಕ್ಷೆಯಲ್ಲಿ ಎಲ್ಲಾ ನಿಯಮಗಳನ್ನು ಉಲ್ಲಂಘಿಸಿ ನೇಮಕ ನೆಡೆದಿದೆ. ಸರ್ಕಾರದಲ್ಲಿರುವ ಯಾರೋ ಕೆಲವು ಆಫಿಷಿಯಲ್ಸ್, ಮಂತ್ರಿಯವರ ಆದೇಶವನ್ನೂ ಉಲ್ಲಂಘಿಸಿದ್ದಾರೆ. ಅವರ ಹೆಸರುಗಳನ್ನು ಈಗತ್ತು ನಮಗೆ ಕೊಡದೇ ಗೌಪ್ಯವಾದ ವಿಚಾರವೆನ್ನುತ್ತಾರೆ . ಆದರೆ, ಇದು ಗೌಪ್ಯವಾದುದ್ದಲ್ಲ. ನನ್ನ ಮೂರನೇ ಪ್ರಶ್ನೆಗೆ 5 ಜನರನ್ನು ನೇಮಿಸಿದ್ದೇವೆನ್ನುತ್ತಾರೆ. ಆದರೆ, ಈ 5 ಜನಕ್ಕೂ ಅರ್ಹತೆಗಳಿಲ್ಲ, ಇವರ್ಯಾರೂ ಪ್ರಿನ್ಸಿಪಾಲರಲ್ಲ ಹಾಗೂ ಇನ್‌ಸ್ಟ್ರಕ್ಟರ್ ಆಗಿ ವಾಣಿಜ್ಯ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿಲ್ಲ. ನಿಯಮದ ಪ್ರಕಾರ ಅವರು ಇನ್‌ಸ್ಟ್ರಕ್ಟರ್ ಅಥವಾ ಪ್ರಿನ್ಸಿಪಾಲಿಗಿರಬೇಕು. ಇಂತಹ ಪರೀಕ್ಷರು ಓದುಗರನ್ನು ಆಯ್ಕೆ ಮಾಡಿದರೆ

ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಯಾರ್ಯಾರು ಪರೀಕ್ಷೆಗೆ ಕಟ್ಟಿದ್ದಾರೋ ಅವರನ್ನೆಲ್ಲಾ ಇವರು ಪ್ರೈವೇಟ್ ವಾಣಿಜ್ಯ ಶಾಲೆಗಳವರ ಜೊತೆ ಸೇರಿಕೊಂಡು ಎಲ್ಲರಿಗೂ ಪಾಸ್ ಕೊಟ್ಟಿದ್ದಾರೆ. ಇದರ ಬಗ್ಗೆ ಬಹಳಷ್ಟು ಅಸಮಧಾನವಿದೆ. ಈ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ, ತಮ್ಮ ಗಮನಕ್ಕೆ ಬಂದಿಲ್ಲ ಅಂತ ಮಾನ್ಯ /ಸಚಿವರು ಹೇಳಿದ್ದಾರೆ. ಈ ರೀತಿ ಪರೀಕ್ಷಕರನ್ನು ಆಯ್ಕೆ ಮಾಡುವುದರಲ್ಲಿ ಬಹಳ ಅನ್ಯಾಯವಾಗಿದೆ ಮತ್ತು ಈ ಕೆಲವು ಅಧಿಕಾರಿಗಳು ಸಂಸ್ಥೆಗಳಲ್ಲಿ ಸರ್ಕಾರಿ ಆಜ್ಞೆ ಉಲ್ಲಂಘಿಸಿದ್ದಾರೆಂದು ನೇರವಾಗಿ ನಾನು ಚಾರ್ಜ್ ಮಾಡುತ್ತಿದ್ದೇನೆ. ಆದ್ದರಿಂದ, ಸಚಿವರು ಇದರ ಬಗ್ಗೆ ಹೇಳಿಕೆ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ರೀಡರ್ಸ್ ಸೆಲೆಕ್ಷನ್ ಕಮಿಟಿಯಲ್ಲಿ ಒಟ್ಟು 14 ಮಂದಿ ಸದಸ್ಯರು ಇದ್ದಾರೆ. ಅವರಲ್ಲಿ 6 ಮಂದಿ ಸ್ಕೈನೋಗ್ರಾಫರ್ಸ್ ಅಥವಾ ವರದಿಗಾರರಾಗಿದ್ದವರು ಈಗ ಬೇರೆ ಬೇರೆ ಮಟ್ಟದಲ್ಲಿ ಅಂದರೆ ಗೆಜ್ಟೆಡ್ ಚೀಫ್ ರಿಪೋರ್ಟರ್ಸ್, ಎಡಿಟರ್ ಅಥವಾ ಡಿಬೇಟ್ಸ್ ಅಸಿಸ್ಟೆಂಟ್ ಎಡಿಟರ್ ಆಫ್ ಡಿಬೇಟ್ಸ್ ಆಗಿದ್ದಾರೆ. ಇನ್ನೂ 5 ಮಂದಿ ಪ್ರಿನ್ಸಿಪಾಲ್ಸ್ ಮತ್ತು ಇನ್‌ಸ್ಟ್ರಕ್ಟರ್ಸ್ ಆಗಿದ್ದಾರೆ. ಇನ್ನುಳಿದ ಇಬ್ಬರು ಇಲಾಖೆಯ ಪರಿವೀಕ್ಷಣಾಧಿಕಾರಿಗಳಿದ್ದಾರೆ. ಇದರಲ್ಲೇನಾದರೂ ಲೋಪವಾಗಿದ್ದರೆ ಅಥವಾ ತಾವು ಹೇಳಿದ ಆಪಾದನೆಗಳಿದ್ದರೆ ದಯಮಾಡಿ ಇದರ ಬಗ್ಗೆ ಹೆಚ್ಚಿನ ವಿವರ ನನಗೆ ಕೊಟ್ಟರೆ ನಾನು ಅದನ್ನು ಖಂಡಿತ ತನಿಖೆ ಮಾಡಿಸುತ್ತೇನೆ: ಆದರೆ, ಕಾಂಕ್ರೀಟಾಗಿ ಏನು ಆಪಾದನೆ ಇಲ್ಲದೆ ವಿಚಾರಣೆ ಮಾಡಲು ನನಗೆ ಕಷ್ಟವಾಗುತ್ತದೆ. ಈ ಬಗ್ಗೆ ಬೇಕಾದರೆ I am prepared to discuss with you. ನಾನು ತಮ್ಮ ಜೊತೆ ಮಾತನಾಡುತ್ತೇನೆ. ಅಥವಾ ಯಾರ ಬಳಿಯಾದರು ವಿವರ ಇದ್ದರೆ ಅವರನ್ನು ತಮ್ಮ ಜೊತೆಗೆ ಕರೆದುಕೊಂಡು ನನ್ನ ಹತ್ತಿರ ಬನ್ನಿ, ನಾವು ಮಾತನಾಡೋಣ, ಬಹುಶಃ ಇದರಲ್ಲಿ ಲೋಪ ದೋಷ ವ್ಯಾಪಕವಾಗಿದ್ದರೆ ಅದನ್ನು ಪರಿಹಾರ ಮಾಡಲು ಹೊಸ ಕ್ರಮ ತೆಗೆದುಕೊಳ್ಳುವುದಿದ್ದರೆ we have an open mind. ಅದನ್ನು ಬದಲಾವಣೆ ಮಾಡಲು ಸಾಧ್ಯವಿದೆ. ನಿಮ್ಮಲ್ಲೇನಾದರೂ ವಿವರಗಳಿದ್ದರೇ, ದಾಖಲೆಗಳಿದ್ದರೆ, ಅವುಗಳನ್ನೂ ಕೊಟ್ಟರೆ ನಾನು ತನಿಖೆ ಮಾಡಿಸುತ್ತೇನೆ. ಅಂತಹ ಆಪಾದನೆ ಇದ್ದವರನ್ನು ಮುಂದುವರೆಸದಂತೆ ಕೂಡ ನಾವು ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ :- ಶೀಘ್ರಲಿಪಿ ಬೋಧನೆಗೆ ಸಂಬಂಧಪಡದವರನ್ನು ಓದುಗರ ಆಯ್ಕೆ ಸಮಿತಿಗೆ ಬೇರೆ ಬೇರೆ ಕೇಂದ್ರಗಳಿಗೆ ನೇಮಕ ಮಾಡಿರುವುದು ಸರ್ಕಾರದ ಗಮನಕ್ಕೆ ಭಂದಿದೆಯೇ ಎಂದರೆ `ಇಲ್ಲ' ಎಂದಿದ್ದಾರೆ. ಆದರೆ, ನನ್ನ ಬಳಿ ಲೆಜಿಸ್ಲೇಚರ್‌ನಲ್ಲಿ ಕೆಲಸ ಮಾಡುವ ಸೆಕ್ಷನ್ ಆಫೀಸರ್ ಹಾಗೂ ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುವವರೊಬ್ಬರ ಹೆಸರುಗಳಿವೆ. ಆದರೆ ಅವರ್ಯಾರೂ ಪ್ರಿನ್ಸಿಪಾಲರು ಅಲ್ಲ , ಇನ್‌ಸ್ಟ್ರೇಕ್ಟರ್ಸ್ ಅಲ್ಲ ಮತ್ತೆ ತಾವೇನೊ ತಮ್ಮ ಮಂತ್ರಿ ಮಂಡಲದಿಂದ ಆದೇಶವನ್ನು ಕೊಟ್ಟದ್ದೀರಿ. ಆದರೆ ಕೆಲವು ಅಧಿಕಾರಿಗಳು ಅದನ್ನು ಉಲ್ಲಂಘನೆ ಮಾಡಿದ್ದಾರೆ. ಉಲ್ಲಂಘನೆ ಮಾಡಿ ತಮಗೆ ಗೊತ್ತಲ್ಲದೆ ಬೋರ್ಡ್ ಆಫ್ ಎಕ್ಸಾಮಿನರ್ಸ್‌ನ್ನು ಮಾಡಿಕೊಂಡಿದ್ದಾರೆ. ಅದು ತಮ್ಮ ಗಮನಕ್ಕೆ ಬಂದಿಲ್ಲ. ತಾವು ಇದರ ಬಗ್ಗೆ ಒಂದು ಎನ್‌ಕ್ವೈರಿಯನ್ನು ಮಾಡಿಸಿದರೆ ಇದರಲ್ಲಿ ಏನು ಅನ್ಯಾಯವಾಗಿದೆ , ಇದೆಲ್ಲಾ ಗೊತ್ತಾಗುತ್ತದೆ . ತಾವು ದಯವಿಟ್ಟು ಇದರ ಬಗ್ಗೆ ಒಂದು ಎನ್‌ಕ್ವೈರಿಯನ್ನು ಮಾಡಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ಅವರು ಸೂಚನೆ ಮಾಡಿದಂತೆ ನಾವು ಖಂಡಿತವಾಗಿಯೂ ತನಿಖೆಯನ್ನು ಮಾಡುತ್ತೇವೆ. ಆದರೆ ಆ ತನಿಖೆ ಪೂರಕವಾಗಿ ಸಹಾಯಕವಾಗುವ ರೀತಿಯಲ್ಲಿ ಅವರು ಕೆಲವು ವಿವರಗಳನ್ನು ಕೊಟ್ಟರೆ ಒಳ್ಳೆಯದಾಗುತ್ತದೆ. ಈ ಬಗ್ಗೆ ಅವರ ಜೊತೆಯಲ್ಲಿ ಸಮಾಲೋಚನೆ ಮಾಡುತ್ತೇನೆ. ಅದಕ್ಕೆ ಅವರು ಹೆಚ್ಚು ಸಹಕಾರವನ್ನು ಕೊಡಬೇಕಾಗುತ್ತದೆ.

ವಿಷಯ:- ಶಿಕ್ಷಕರ ಹುದ್ದೆಗಳ ಭರ್ತಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 427 (2104)